## ಕೃತಕ ಹೃದಯ ನೀಡಿದ ಅಭಯ!

# ಹೃದಯ ಕಸಿಯಿಂದ ಪುನರ್ಜನ್ಮ



**ಕೃತಕ ಹೃದಯವನ್ನು ಅಳವಡಿಸಿಕೊಂಡು ಒಟ್ಟು 155 ದಿನ ಇದ್ದ 42ರ ಹರೆಯದ ಮಹಿಳೆಯೊಬ್ಬರಿಗೆ ದಾನಿಯಿಂದ ಪಡೆದ ಹೃದಯವನ್ನು ಕಸಿ ಮಾಡಲಾಗಿದ್ದು, ಈಗ ಮಹಿಳೆ ಸಂಪೂರ್ಣ ಗುಣಮುಖರಾಗಿದ್ದಾರೆ. ಆ ಮೂಲಕ ಸುದೀರ್ಘ ಅವಧಿಯಲ್ಲಿ ಕೃತಕ ಹೃದಯದಲ್ಲಿ ಬದುಕಿನೊಂದಿಗೆ ಹೋರಾಟ ನಡೆಸಿದ ಅಪರೂಪದ ಮಹಿಳೆ ಎನಿಸಿಕೊಂಡಿದ್ದಾರೆ.**

■ **ಉಮಾ ಅನಂತ್**

ಬೆಂಗಳೂರಿನ ಆಶಾಗೆ ವಯಸ್ಸು 42. ಎರಡು ವರ್ಷಗಳ ಹಿಂದೆ ಹೃದಯ ಸಂಬಂಧಿ ತೊಂದರೆಯಿಂದ ಬಳಲಿದ ಆಶಾ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ದು ತಪಾಸಣೆ ನಡೆಸಿದಾಗ ಅವರಿಗೆ ಹೃದಯದಲ್ಲಿ ರಕ್ತ ಪಂಪಿಂಗ್ ಮಾಡುವ ಸಾಮರ್ಥ್ಯ ಕಡಿಮೆಯಾಗಿದ್ದು ಗೊತ್ತಾಗಿದೆ. ಇದರಿಂದ ಹೃದಯದ ಕಾರ್ಯಕ್ಷಮತೆ ಗಣನೀಯವಾಗಿ ಕುಗ್ಗಿತ್ತು. ಹೃದಯ ಬಡಿತವೂ ಅನಿಯಮಿತವಾಗಿತ್ತು. ಸೂಕ್ಷ್ಮವಾಗಿ ಪರೀಕ್ಷೆ ನಡೆಸಿದ ವೈದ್ಯರು ಆಶಾ ಹೃದಯಕ್ಕೆ ಪೇಸ್‌ಮೇಕರ್ ಅಳವಡಿಸಿ ಎಲ್ಲ ರೀತಿಯ ಚಿಕಿತ್ಸೆ ನೀಡಿದ್ದರು.

ಮೇಲ್ನೋಟಕ್ಕೆ ಕೊಂಚ ಸುಧಾರಿಸಿದಂತೆ ಕಂಡರೂ ಕಳೆದ ಫೆಬ್ರುವರಿಯಲ್ಲಿ ಆಶಾ ಹೃದಯ ಪರಿಸ್ಥಿತಿ ಗಣನೀಯವಾಗಿ ಹದಗೆಟ್ಟಿತ್ತು. ಆತಂಕ, ಆಘಾತ ಎರಡನ್ನೂ ಹುಟ್ಟಿಸುವ ಭೀತಿಯ ವಾತಾವರಣ ಮನೆಯಲ್ಲಿ ಉಂಟಾಗಿತ್ತು. ತಕ್ಷಣ ಮತ್ತೆ ಆಸ್ಪತ್ರೆಗೆ ದಾಖಲಿಸಿದ ಇವರಿಗೆ ಬಿಐ–ವಿಎಡಿ ಎಂಬ ಕೃತಕ ಹೃದಯ ಬೆಂಬಲ ಯಂತ್ರವನ್ನು ಹೃದಯಕ್ಕೆ ಅಳವಡಿಸಲಾಗಿತ್ತು. ಆಸ್ಪತ್ರೆಯ ಐಸಿಯು ನಲ್ಲೇ ಕಳೆಯಬೇಕಾದ ಅನಿವಾರ್ಯತೆಯೂ ಇತ್ತು. ಏಕೆಂದರೆ ಜೀವಂತ ಹೃದಯಕ್ಕಾಗಿ ಆಶಾ ಮನೆಯವರು ದಾನಿಯೊಬ್ಬರನ್ನು ಕಾಯಬೇಕಿತ್ತು.

ಸುಮಾರು ಐದೂವರೆ (155 ದಿನಗಳು) ತಿಂಗಳು ಕಾದ ಬಳಿಕ ದಾನಿಯೊಬ್ಬರಿಂದ ಹೃದಯವನ್ನು ಪಡೆದು ಗಂಭೀರವಾದ ಹೃದಯ ಕಸಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು ಆಶಾ. ಮೊದಲೆಲ್ಲ ಎರಡು ಮೆಟ್ಟಿಲು ಹತ್ತಲು ಬೇರೆಯವರ ಸಹಾಯ. ಬೆಂಬಲ ಪಡೆಯುತ್ತಿದ್ದ ಇವರು ಈಗ ಮೂರು ಮಹಡಿಯ ಮೆಟ್ಟಿಲುಗಳನ್ನು ಸಲೀಸಾಗಿ ಹತ್ತಿ ಇಳಿಯುವಷ್ಟು ಸುಧಾರಿಸಿಕೊಂಡಿದ್ದಾರೆ.

### ಮಹಿಳೆಗೆ ಪುನರ್ಜನ್ಮ!

ಬೆಂಗಳೂರಿನ ಆರ್‌ಟಿ ನಗರದ ನಿವಾಸಿ ಆನಂದಮೂರ್ತಿ ಅವರ ಮಡದಿ ಆಶಾ ಹೃದಯ ದೌರ್ಬಲ್ಯ ಸಮಸ್ಯೆಯಿಂದ ಬಳಲಿದ್ದು ಪೇಸ್‌ಮೇಕರ್ ಅಳವಡಿಸಿಕೊಂಡಿದ್ದರು. ಆರು ತಿಂಗಳ ಹಿಂದೆ ಆರೋಗ್ಯದಲ್ಲಿ ವಿಪರೀತ ಏರುಪೇರು ಉಂಟಾಗಿ ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯ ಐಸಿಯುಗೆ ದಾಖಲಾದರು. ಆದರೆ ಆಕೆ ಬದುಕಿ ಉಳಿಯಬೇಕಾದರೆ ಯಾವುದೇ ಸ್ಟೆಂಟ್ ಆಗಲಿ, ಪೇಸ್‌ಮೇಕರ್‌ನಿಂದಾಗಲಿ ಸಾಧ್ಯವಿರಲಿಲ್ಲ. ಆಗ ವೈದ್ಯರು ಆಶಾಗೆ ಬಿಐ–ವಿಎಡಿ ಎಂಬ ಕೃತಕ ಹೃದಯ ಅಳವಡಿಸಿದರು. ಐಸೊಲೇಶನ್ ಕೊಠಡಿಯಲ್ಲಿಟ್ಟು ತೀವ್ರ ನಿಗಾ ವಹಿಸಿದರು. ಅದೃಷ್ಟವಶಾತ್ ಸುಮಾರು ಆರು ತಿಂಗಳ ಬಳಿಕ ಅವರಿಗೆ ದಾನಿಗಳಿಂದ ಹೃದಯ ದೊರೆಯಿತು. ವಿಕ್ರಮ್ ಆಸ್ಪತ್ರೆಯ ಡಾ. ನರೇಂದ್ರ ನೇತೃತ್ವದ ವೈದ್ಯರ ತಂಡ ಅತ್ಯಂತ ಸವಾಲಿನ ಶಸ್ತ್ರಚಿಕಿತ್ಸೆ ನಡೆಸಿ ಮಹಿಳೆಗೆ ಹೃದಯ ಶಸ್ತ್ರಚಿಕಿತ್ಸೆ ನಡೆಸಿದ ಪರಿಣಾಮ ಇಂದು ಮಹಿಳೆಗೆ 'ಪುನರ್ಜನ್ಮ' ದೊರಕಿದೆ.



ಕೃತಕ ಹೃದಯ

'ಈ ಪ್ರಕರಣ ಬಹಳ ಸವಾಲಿನದಾಗಿತ್ತು. ಈ ರೋಗಿಯ ಹೃದಯ ಬಡಿತದಲ್ಲಿ ವಿಪರೀತ ಏರುಪೇರು ಕಂಡುಬಂದಿತ್ತು. ಇದನ್ನು ವೈದ್ಯಕೀಯ ಭಾಷೆಯಲ್ಲಿ 'ವೆಂಟ್ರಿಕ್ಯುಲರ್ ಟ್ಯಾಚಿಕಾರ್ಡಿಯಾ' ಎಂದು ಕರೆಯಲಾಗುತ್ತದೆ. ರೋಗಿಗೆ ಆಟೊಮೇಟೆಡ್ ಇಂಪ್ಲಾಂಟೇಬಲ್ ಕಾರ್ಡಿಯೊವರ್ಟರ್ ಡಿಫೈಬ್ರಿಲೇಟರ್' ಅನ್ನು ಅಳವಡಿಸಿದೆವು. ಇದರಿಂದ ಆಕೆಯ ಆರೋಗ್ಯ ಸುಧಾರಿಸಿದಂತೆ ಕಾಣಿಸಲಿಲ್ಲ. ಹೀಗಾಗಿ ಕೃತಕ ಹೃದಯ ಅಳವಡಿಸಿದ ಸುಮಾರು ಆರು ತಿಂಗಳು ಆಸ್ಪತ್ರೆಯಲ್ಲಿ ನೋಡಿಕೊಂಡೆವು. ಈಗ ಹೃದಯ ಕಸಿ ಮಾಡಿಸಿಕೊಂಡ ಮಹಿಳೆ ಆರೋಗ್ಯಪೂರ್ಣವಾಗಿದ್ದಾರೆ' ಎಂದು ಹೇಳುತ್ತಾರೆ ವಿಕ್ರಮ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ, ಹೃದಯತಜ್ಞ ಡಾ.ಪಿ. ರಂಗನಾಥ ನಾಯಕ್.

'ಹೃದಯವೈಫಲ್ಯ' (ಕಾರ್ಡಿಯಾಕ್ ಫೈಲ್ಯೂರ್) ಎಂಬುದು ಅಸಾಮಾನ್ಯ ರೋಗವಾಗಿದ್ದು, ಈಗೀಗ ಸರ್ವೇಸಾಮಾನ್ಯವಾಗುತ್ತಿದೆ. ಈ ಹೃದಯ ವೈಫಲ್ಯವು ದೇಶದಲ್ಲಿ ಸುಮಾರು ಶೇ. 2ರಷ್ಟು ಜನರನ್ನು ಬಾಧಿಸುತ್ತಿದೆ. ಇದು ಜೀವಿತಾವಧಿಯನ್ನು ಕಡಿಮೆ ಮಾಡುತ್ತದೆ. ಇದಕ್ಕೆ ಹೃದಯ ಕಸಿ ಒಂದೇ ದಾರಿ' ಎಂದು ವಿವರ ನೀಡುತ್ತಾರೆ ವಿಕ್ರಂ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರಚಿಕಿತ್ಸಕರಾಗಿರುವ ಡಾ. ನರೇಂದ್ರ.

'ಭಾರತದಲ್ಲಿ ಕೃತಕ ಹೃದಯ ಯಂತ್ರ ಅಳವಡಿಸಿ ಗರಿಷ್ಠ 65 ದಿನ ರೋಗಿ ಇದ್ದರು. ಆದರೆ 155 ದಿನಗಳಷ್ಟು ಸುದೀರ್ಘ ದಿನಗಳ ಕಾಲ ಕೃತಕ ಹೃದಯದಲ್ಲೇ ಇದ್ದ ಏಕೈಕ ಉದಾಹರಣೆ ಈ ಮಹಿಳೆಯದ್ದೇ' ಎಂದು ಮಾಹಿತಿ ನೀಡುತ್ತಾರೆ ಈ ವೈದ್ಯರು. ■